26ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಮೆಯೋಹಾಲ್, ಬೆಂಗಳೂರು.

ಶ್ರೀ.ಡಿ.ಎಸ್. ವಿಜಯ್ ಕುಮಾರ್, ಬಿ.ಎಸ್.ಸಿ., ಎಲ್.ಎಲ್.ಬಿ.,
26ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು.

ದಿನಾಂಕ ಃ 26ನೇ ಫೆಬ್ರವರಿ 2021.

ಕ್ರಿಮಿನಲ್.ಮಿಸ್.ನಂ. 25192 /2021

ಆರೋಪಿತರು ಃ

1) ದಿವಾಕರ್ ಬಿನ್ ದೇವಸಗಾಯಂ,
ವಯಸ್ಸು ಃ 26 ವರ್ಷ,
ವಾಸಃ ನಂ.1128, 235, 2ನೇ ಅಡ್ಡರಸ್ತೆ ,
ಹಳೇ ಬಾಗಲೂರು ಲೇಔಟ್, ಸೇಂಟ್ ಥಾಮಸ್ ರಸ್ತೆ ,
ಬೆಂಗಳೂರು-560 084. (ಆರೋಪಿ ಸಂಖ್ಯೆ ಃ 1)

2) ಸುರೇಶ್ @ ಕಿಟ್ಟು ಬಿನ್ ಡೇವಿಡ್,
ವಯಸ್ಸು ಃ 25 ವರ್ಷ, ವಾಸಃ 18ನೇ ಅಡ್ಡರಸ್ತೆ ,
ಹಳೇ ಬಾಗಲೂರು ಲೇಔಟ್, ಸೇಂಟ್ ಥಾಮಸ್ ರಸ್ತೆ ,
ಬೆಂಗಳೂರು-560 084. (ಆರೋಪಿ ಸಂಖ್ಯೆ ಃ 2)

3) ಸ್ಟೀಫನ್ ಬಿನ್ ಅಮ್ಮು ,
ವಯಸ್ಸುಃ 24 ವರ್ಷ,
ವಾಸಃ 1, 20ನೇ ಅಡ್ಡರಸ್ತೆ , ಅವ್ವ ಮೇರಿ ಚರ್ಚ್ ಹತ್ತಿರ,
ಹಳೇ ಬಾಗಲೂರು ಲೇಔಟ್, ಸೇಂಟ್ ಥಾಮಸ್ ರಸ್ತೆ ,
ಬೆಂಗಳೂರು-560 084. (ಆರೋಪಿ ಸಂಖ್ಯೆ ಃ 4)

(ಆರೋಪಿತರ ವಕೀಲರು- ಪ್ರದೀಪ ಎ.)

- ವಿರುದ್ಧ -

ದೂರುದಾರ : ಕಾಡುಗೊಂಡನಹಳ್ಳಿ ಪೊಲೀಸ್ ಠಾಣೆ,
ಬೆಂಗಳೂರು.

(ಪ್ರತಿವಾದಿಯ ವಕೀಲರು- ಸರ್ಕಾರಿ ಅಭಿಯೋಜಕರು)

## ಆದೇಶ

ಅರ್ಜಿದಾರರು ಈ ಅರ್ಜಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 438 ರ ಅಡಿಯಲ್ಲಿ ಮೊಕದ್ದಮೆ ಸಂಖ್ಯೆ: 250/2020 ರಲ್ಲಿ ಭಾ.ದ.ಸಂ. ಕಲಂ. 143, 147, 148, 448, 427, 323, 324, 307 ಸಹವಾಚಕ 149 ರ ಅಡಿಯಲ್ಲಿ ಎದುರುದಾರ ಪೊಲೀಸ್ ಠಾಣೆಯವರು ನೋಂದಾವಣಿಯಾಗಿರುವ ಮೊಕದ್ದಮೆಯಲ್ಲಿ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ.

2. ಅರ್ಜಿದಾರರ ಈ ಅರ್ಜಿಯ ಸಾರಾಂಶ ಈ ಕೆಳಕಂಡಂತೆ ಇದೆ:-

ಎದುರುದಾರ ಪೋಲಿಸ್ ಠಾಣೆಯವರು ದೂರುದಾರಳಾದ ಶ್ರೀಮತಿ.ಅಮ್ಮು ನೀಡಿರುವ ಪ್ರಥಮ ಮಾಹಿತಿ ಆಧರಿಸಿ ಮೇಲ್ಕಂಡ ಪ್ರಕರಣ ದಾಖಲಿಸಿದ್ದಾರೆ. ಅವರು ಯಾವುದೇ ಅಪರಾಧ ಎಸಗಿಲ್ಲ ಅವರನ್ನು ಉದ್ದೇಶಪೂರ್ವಕವಾಗಿ ಪ್ರಕರಣದಲ್ಲಿ ಸಿಲುಕಿಸಲಾಗಿದೆ. ಅರ್ಜಿದಾರರು ತನಿಖೆಗೆ ಅವಶ್ಯಕವಿರುವುದಿಲ್ಲ, ಅವರು ಸೂಕ್ತ ಜಾಮೀನು ನೀಡಲು ತಯಾರಿದ್ದಾರೆ. ಅರ್ಜಿದಾರ ಯಾವುದೇ ಷರತ್ತು ಪಾಲನೆ ಮಾಡಲು ತಯಾರಿದ್ದಾರೆ ಆದ್ದರಿಂದ ಜಾಮೀನು ಬಿಡುಗಡೆ ನೀಡಬೇಕೆಂದು ಕೋರಿರುತ್ತಾರೆ.

3. ಅಭಿಯೋಜನೆಯ ತಕರಾರು ಸಲ್ಲಿಸಿ ದೂರಿನ ಅಂಶಗಳನ್ನು ಪುನರುಚ್ಚರಿಸಿ ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಟ್ಟರೇ ಅವನು ತಲೆಮರೆಸಿಕೊಂಡು ಹೋಗುವ ಸಾಧ್ಯತೆ ಇದೆ. ಸಾಕ್ಷಿಗಳಿಗೆ ಬೆದರಿಕೆ ಹಾಕಿ ಸಾಕ್ಷ್ಯ ನಾಶ ಮಾಡುವ ಸಾಧ್ಯತೆ ಇದೆ. ಆದ್ದರಿಂದ ಜಾಮೀನು ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿದೆ.

4. ವಾದವನ್ನು ಕೇಳಲಾಗಿದೆ.

5. ಈ ಮೇಲ್ಕಂಡ ಸನ್ನಿವೇಶಗಳಲ್ಲಿ ಈ ಮುಂದಿನ ಅಂಶಗಳನ್ನು ನಿರ್ಣಯಿಸಲಾಗಿದೆಃ-

<u>ಅಂಶಗಳು</u>

ಅಂಶ 1ಃ ಅರ್ಜಿದಾರರು ಕೋರಿರುವಂತೆ ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರೆ?

ಅಂಶ 2ಃ ಯಾವ ಆದೇಶ?

6. ಮೇಲ್ಕಂಡ ಅಂಶಗಳನ್ನು ಈ ಮುಂದಿನಂತೆ ನಿರ್ಣಯಿಸಲಾಗಿದೆ.

ಅಂಶಃ 1 ನಕಾರಾತ್ಮಕವಾಗಿ

ಅಂಶಃ 2 ಅಂತಿಮ ಆದೇಶದಂತೆ.

ಕಾರಣಗಳು

7. ಅಂಶ 1ಃ- ಶ್ರೀಮತಿ ಅಮ್ಮು ಎಂಬ ಮಹಿಳೆ ದಿನಾಂಕಃ 26.08.2020 ರಲ್ಲಿ ನೀಡಿರುವ ದೂರನ್ನು ಆಧರಿಸಿ ಎದುರುದಾರ ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ

ಪ್ರಕ್ರಿಯಾ ಸಂಹಿತೆ ಕಲಂ. 143, 147, 148, 448, 427, 323, 324, 307 ಸಹವಾಚಕ 149 ರ ಅಡಿಯಲ್ಲಿ ಅಪರಾಧ ಸಂಖ್ಯೆ: 250 /2020 ರಲ್ಲಿ ಏಳು ಜನ ಆರೋಪಿಗಳ ವಿರುದ್ಧ ಮೊಕದ್ದಮೆ ದಾಖಲಿಸಲಾಗಿರುತ್ತದೆ. ದೂರಿನ ಸಾರಾಂಶದ ಪ್ರಕಾರ ಪಿರ್ಯಾದಿದಾರಳ ಮಗ ಕಾರ್ತಿಕ್ ಎನ್ನುವವನು ಎರಡೂವರೆ ವರ್ಷಗಳ ಕಾಲ ಕೊಲೆ ಕೇಸ್‌ನಲ್ಲಿ ಕಾರಾಗೃಹದಲ್ಲಿ ಇದ್ದು ಜಾಮೀನು ಮೇಲೆ ಹೊರಬಂದಿದ್ದ , ಆ ಸಂಬಂಧದಲ್ಲಿ ಈ ಕೇಸ್‌ನ ಆರೋಪಿಗಳು ಕಾರ್ತಿಕ್‌ನನ್ನು ಕೊಲೆಮಾಡಲು ಹೊಂಚು ಹಾಕುತ್ತಿದ್ದರು. ದಿನಾಂಕ : 25.08.2020 ರಂದು ರಾತ್ರಿ 11-00 ಗಂಟೆಯ ಸಮಯದಲ್ಲಿ ಪಿರ್ಯಾದುದಾರಳ ಹಿರಿಯ ಮಗ ಸಂತೋಷ ಎನ್ನುವವನು ಮನೆಯ ಹತ್ತಿರ ನಿಂತಿರಬೇಕಾದರೆ 1 ಮತ್ತು 4ನೇ ಆರೋಪಿಗಳು/1 ಮತ್ತು 3ನೇ ಅರ್ಜಿದಾರರು ಇತರ ಆರೋಪಿಗಳ ಜೊತೆ ಬಂದು ಸಂತೋಷ್‌ಗೆ ಹೊಡೆದುಹಾಕಿದರು. ನಂತರ ಅದೇ ದಿನ ರಾತ್ರಿ ಮನೆಯಲ್ಲಿ ಕುಟುಂಬದವರೆಲ್ಲಾ ಮಲಗಿರುವಾಗ ರಾತ್ರಿ 2-30 ಗಂಟೆಯ ಸಮಯದಲ್ಲಿ 1 ಮತ್ತು 2ನೇ ಆರೋಪಿಗಳು ಇತರೆ ಹೆಲ್‌ಮೆಟ್ ಧರಿಸಿದ್ದ ಆರೋಪಿಗಳ ಜೊತೆ ಪಿರ್ಯಾದಿದಾರರ ಮನೆಯ ಬಾಗಿಲನ್ನು ಹೊಡೆದು ಹಾಕಿ ಒಳಗೆ ನುಗ್ಗಿ ಕೈಗಳಲ್ಲಿ ಲಾಂಗ್, ರಾಡು, ಬೀರ್ ಬಾಟಲ್‌ಗಳನ್ನು ಹೊಂದಿದ್ದು , ಅವುಗಳಿಂದ ಪಿರ್ಯಾದುದಾರಳು ಮತ್ತು ಆಕೆಯ ಮಕ್ಕಳಿಗೆ ಹಲ್ಲೆ ಮಾಡಿದ್ದು , ಕಾರ್ತಿಕ್‌ನನ್ನು ಕೊಲೆಮಾಡಲು ಪ್ರಯತ್ನಿಸಿರುತ್ತಾರೆ. 1ನೇ ಆರೋಪಿ/1ನೇ ಅರ್ಜಿದಾರ ಪಿರ್ಯಾದಿದಾರಳ ಎಡಗೈ ಮಣಿಕಟ್ಟಿಗೆ ಚಾಕುವಿನಿಂದ ಹೊಡೆದಿರುತ್ತಾರೆ. ಆಕೆಯ ಇನ್ನೊಬ್ಬ ಮಗ ದಿನೇಶ್‌ನಿಗೆ 2ನೇ ಆರೋಪಿ/2ನೇ ಅರ್ಜಿದಾರ ಚಾಕುವಿನಿಂದ ಬಲ ಹಸ್ತಕ್ಕೆ ಹೊಡೆದಿರುತ್ತಾನೆ. 4ನೇ

ಆರೋಪಿ/3ನೇ ಅರ್ಜಿದಾರ ಚಾಕುವಿನಿಂದ ಆಕೆಯ ಇನ್ನೊಬ್ಬ ಮಗ ಧನುಷ್ ಎನ್ನುವವನ ಎಡಗೈಗೆ ಹೊಡೆದು ಗಾಯಪಡಿಸಿರುತ್ತಾನೆ. ಅಲ್ಲದೆ ಎಲ್ಲಾ ಆರೋಪಿಗಳು ಮನೆಯಲ್ಲಿದ್ದ ಎಲ್ಲಾ ವಸ್ತುಗಳನ್ನು ಧ್ವಂಸಗೊಳಿಸಿ ರಾಡನ್ನು ಬಿಸಾಡಿ ಹೋಗಿರುತ್ತಾರೆ.

8. ಮೇಲ್ಕಂಡ ದೂರನ್ನು ಗಮನಿಸಿದಾಗ 1 ರಿಂದ 3ನೇ ಅರ್ಜಿದಾರರು /1, 2 ಮತ್ತು 4ನೇ ಆರೋಪಿಗಳಾಗಿದ್ದು , ಅವರ ವಿರುದ್ಧ ಗಂಭಿರ ಸ್ವರೂಪದ ಆಪಾದನೆ ಇರುತ್ತದೆ. ಮಧ್ಯರಾತ್ರಿ ಮನೆಯ ಬಾಗಿಲನ್ನು ಹೊಡೆದು ಹಾಕಿ ಒಳಗೆ ನುಗ್ಗಿ ಅವರು ಅಪಾಯಕರ ಆಯುಧಗಳಿಂದ ಹಲ್ಲೆ ಮಾಡಿರುತ್ತಾರೆ ಹಾಗೂ ಮನೆಯಲ್ಲಿದ್ದ ವಸ್ತುಗಳನ್ನು ಧ್ವಂತ ಮಾಡಿರುತ್ತಾರೆಂದು ಆಪಾದನೆ ಇರುತ್ತದೆ. ಹಾಗಿರುವಾಗ ಇನ್ನೂ ತನಿಖೆ ಮುಗಿದಿಲ್ಲ. ಅರ್ಜಿದಾರರು ತಲೆಮರೆಸಿಕೊಂಡಿರುವುದು ಕಂಡುಬರುತ್ತದೆ. ಪ್ರಕಾರಣದ ಸನ್ನಿವೇಶಗಳಲ್ಲಿ ನಿರೀಕ್ಷಣಾ ಜಾಮೀನು ನೀಡುವುದು ಇದು ಸೂಕ್ತವಾಗಿರುವುದಿಲ್ಲ . ತತ್ಪರಿಣಾಮವಾಗಿ ಅಂಶ 1ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

9. ಅಂಶ 2 ಃ ಮೇಲ್ಕಂಡ ಕಾರಣಗಳಿಗಾಗಿ ಈ ಮುಂದಿನ

<u>ಆ ದೇ ಶ</u>

ಅರ್ಜಿದಾರರು ನಿರೀಕ್ಷಣಾ ಜಾಮೀನು ಕೋರಿ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 438 ರ ಅಡಿಯಲ್ಲಿ ಸಲ್ಲಿಸಿರುವ ಈ ಅರ್ಜಿಯನ್ನು ಈ ಮೂಲಕ ವಜಾಗೊಳಿಸಲಾಗಿದೆ.

(ತೀರ್ಪುಬರಹಗಾರನಿಗೆ ಉಕ್ತಲೇಖನ ನೀಡಲಾಗಿ ಅವರು ತರ್ಜಿಮೆಮಾಡಿ ಬೆರಳಚ್ಚು ಮಾಡಿದ ಮೂಲಕ ತಿದ್ದುಪಡಿ ಮಾಡಿದ ಮೇಲೆ ಅದನ್ನು ತಿದ್ದುಪಡಿ ಮಾಡಿ ಈ ದಿನ 26ನೇ ಫೆಬ್ರವರಿ 2021 ರಲ್ಲಿ ತೆರೆದ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು)

**(ಡಿ.ಎಸ್.ವಿಜಯ ಕುಮಾರ್)**
26ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು.

<u>ತೆರದ ನ್ಯಾಯಾಲಯದಲ್ಲಿ ಆದೇಶವನ್ನು ಘೋಷಿಸಲಾಯಿತು, ಪ್ರತ್ಯೇಕ ಆದೇಶದ ಪ್ರತಿ ಇದೆ</u>

ಅರ್ಜಿದಾರರು /1 ಮತ್ತು 2ನೇ ಆರೋಪಿಗಳು ನಿರೀಕ್ಷಣಾ ಜಾಮೀನು ಕೋರಿ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 438ರ ಅಡಿಯಲ್ಲಿ ಸಲ್ಲಿಸಿರುವ ಈ ಅರ್ಜಿಯನ್ನು ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಪುರಸ್ಕರಿಸಲಾಗಿದೆ.

: ಷರತ್ತುಗಳು :

1. ಅರ್ಜಿದಾರರು/1 ಮತ್ತು 2ನೇ ಆರೋಪಿಗಳು ಅಭಿಯೋಜನೆಯ ಸಾಕ್ಷಿಗಳಿಗೆ ಯಾವುದೇ ರೀತಿಯ ಬೆದರಿಕೆ ಹಾಕಬಾರದು ಮತ್ತು ಸಾಕ್ಷ್ಯ ನಾಶ ಮಾಡಬಾರದು.

2. ಅರ್ಜಿದಾರರು ಪುನಃ ಇಂತಹ ಅಪರಾದಗಳನ್ನು ಎಸಗಬಾರದು.

3. ಅರ್ಜಿದಾರರು ತನಿಖೆ ಮುಗಿಯುವವರೆಗೆ ನ್ಯಾಯಾಲಯದ ವ್ಯಾಪ್ತಿಯಿಂದ ಹೊರಗಡೆ ಹೋಗಬಾರದು.

4. 1 ಮತ್ತು 2 ನೇ ಅರ್ಜಿದಾರರು ಎದುರುದಾರ ಪೊಲೀಸ್ ಠಾಣೆಯಲ್ಲಿ ಠಾಣಾಧಿಕಾರಿ ಮುಂದೆ ಪ್ರತಿ ಭಾನುವಾರದಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯ ಅವಧಿಯ ವರೆಗೆ ಈ ದಿನಾಂಕದಿಂದ 3 ತಿಂಗಳ

ಕಾಲ ಹಾಜರಾಗುವುದು ಮತ್ತು ತನಿಖೆಗೆ ತನಿಖಾಧಿಕಾರಿಗೆ ಪೂರ್ಣ ಸಹಕಾರ ನೀಡುವುದು.

ಮೇಲಿನ ಷರತ್ತುಗಳನ್ನು ಒಳಪಟ್ಟು ಒಂದು ವೇಳೆ ಎದುರುದಾರ ಪೋಲಿಸರು ಅರ್ಜಿದಾರರನ್ನು ಮೇಲ್ಕಂಡ ಪ್ರಕರಣದಲ್ಲಿ ಬಂಧಿಸಿದರೆ ಅವರು ತಲಾ ರೂ. 50,000/- ಕ್ಕೆ ಸ್ವಂತ ಮುಚ್ಚಳಿಕೆ ಮತ್ತು ಅದೇ ಮೊತ್ತಕ್ಕೆ ಒಬ್ಬ ಜಾಮೀನುದಾರನನ್ನು ನೀಡಿದಲ್ಲಿ ಅರ್ಜಿದಾರರನ್ನು ಕೂಡಲೇ ಜಾಮೀನಿನಲ್ಲಿ ಬಿಡುಗಡೆ ಮಾಡತಕ್ಕದ್ದು.

**(ಡಿ.ಎಸ್.ವಿಜಯ ಕುಮಾರ್)**
26ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು.